ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

## 9ನೇ ಅಧಿವೇಶನದ ಒಳನೋಟ

ವಿಧಾನಸಭೆಯ 9ನೇ ಅಧಿವೇಶನದ ಕಾರ್ಯ ಕಲಾಪವು ಸುಗಮವಾಗಿ 7 ದಿನಗಳ ಕಾಲ ನಡೆಯಿತು. ಸದನವನ್ನು ಶುಕ್ರವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.



**ಮಂಡನೆಗಳು**

- ಭರವಸೆ ಸಮಿತಿಯ 8ನೇ ವರದಿ
- 11 ಅಧಿಸೂಚನೆಗಳು
- 03 ಆಧ್ಯಾದೇಶಗಳು
- 42 ವಾರ್ಷಿಕ ವರದಿಗಳು
- 20ಲೆಕ್ಕಪರಿಶೋಧನಾ ವರದಿ
- 02 ಅನುಷ್ಠಾನ ವರದಿಗಳು
- 01 ತಪಾಸಣಾ ವರದಿಗಳು
- 01 ವಿಶೇಷ ವರದಿ

**1** ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಸ್ವೀಕಾರದ ವೇಳೆ 12ಗಂಟೆ 34 ನಿಮಿಷ ಚರ್ಚೆ ನಡೆದು, 20 ಸದಸ್ಯರು ಮಾತನಾಡಿದ್ದಾರೆ.

**7** ದಿನ ಅಧಿವೇಶನ (ಜ.28ರಿಂದ ಫೆ.5)

**ನಡೆದ ಸಮಯ** 33 ಗಂಟೆ 50 ನಿಮಿಷ

**ಪ್ರಗತಿ** ಶೇ.90ರಷ್ಟು ಕಲಾಪ ಯಶಸ್ವಿ

**ಅಂಗೀಕಾರ** 14 ವಿಧೇಯಕಗಳು

**ಚರ್ಚೆ** 01 ನಿಲುವಳಿ ಸೂಚನೆ

**1320** ಪ್ರಶ್ನೆಗಳು ಸ್ವೀಕಾರ

**897** ಲಿಖಿತ ಪ್ರಶ್ನೆಗಳಿಗೆ ಲಿಖಿತ ಉತ್ತರ ಮಂಡನೆ

**50** ಸೂಚನೆಗಳಲ್ಲಿ 30ಕ್ಕೆ ಉತ್ತರ ಸ್ವೀಕಾರ

**ಪ್ರಶ್ನೆಗಳು**

**88** ಸದನದಲ್ಲಿ ಉತ್ತರಿಸಿದ ಪ್ರಶ್ನೆಗಳು

**168** ಗಮನ ಸೆಳೆಯುವ ಸೂಚನೆಗಳಲ್ಲಿ 69ಕ್ಕೆ ಚರ್ಚೆ

**13** ಪ್ರಶ್ನೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ

### ಪರಿಷತ್ ಸಭಾಪತಿ ಸ್ಥಾನಕ್ಕೆ 9ರಂದು ಚುನಾವಣೆ ನಿಗದಿ

# ಹೊರಟ್ಟಿ ಆಯ್ಕೆ ಬಹುತೇಕ ನಿಶ್ಚಿತ

ಕೆ.ಪ್ರತಾಪಚಂದ್ರ ಶೆಟ್ಟಿ ರಾಜೀನಾಮೆಯಿಂದ ತೆರವಾದ ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಮಂಗಳವಾರ (ಫೆ.9)ರಂದು ಚುನಾವಣೆ ನಿಗದಿಯಾಗಿದೆ.

ಜೆಡಿಎಸ್-ಆಡಳಿತಾರೂಢ ಬಿಜೆಪಿ ಈಗಾಗಲೇ ಮಾಡಿಕೊಂಡಿರುವ ಒಪ್ಪಂದದಂತೆ ಎರಡೂ ಪಕ್ಷಗಳ ಅಭ್ಯರ್ಥಿಯಾಗಿ ಹಿರಿಯ ಸದಸ್ಯ, ಬಸವರಾಜ ಹೊರಟ್ಟಿ ನಾಮಪತ್ರ ಸಲ್ಲಿಸಲಿದ್ದು, ಅವರು ಆಯ್ಕೆಯಾಗುವುದು ಬಹುತೇಕ ನಿಶ್ಚಿತವಾಗಿದೆ.

ಆದರೆ, ಕಾಂಗ್ರೆಸ್ ಸಭಾಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನು ಕಣಕ್ಕಿಳಿಸಲಿದೆಯೋ ಅಥವಾ ಅಭ್ಯರ್ಥಿಯನ್ನು ಹಾಕದೆ ಬಸವರಾಜ ಹೊರಟ್ಟಿ ಅವರ ಅವಿರೋಧ ಆಯ್ಕೆಗೆ ಸಮ್ಮತಿಸಲಿದೆಯೋ ಎಂಬುದನ್ನು ಕಾದು ನೋಡಬೇಕಿದೆ. ಹಾಗಾಗಿ, ಕಾಂಗ್ರೆಸ್ ಪಕ್ಷದ ನಡೆ ಕುತೂಹಲ ಮೂಡಿಸಿದೆ.

ನಿಗದಿಯಂತೆ ಪರಿಷತ್ ಕಲಾಪ ಶುಕ್ರವಾರ ಮುಕ್ತಾಯಗೊಳ್ಳಬೇಕಿತ್ತು. ಆದರೆ ಬಿಜೆಪಿ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಹಿನ್ನೆಲೆಯಲ್ಲಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಆ ಸ್ಥಾನ ತುಂಬಲು ಚುನಾವಣೆ ನಡೆಸುವ ಉದ್ದೇಶದಿಂದ ಸದನದ ಕಲಾಪವನ್ನು ಮೂರು ದಿನ ಅಂದರೆ



ಫೆ.10ರವರೆಗೆ ವಿಸ್ತರಣೆ ಮಾಡಲಾಗಿದೆ.

ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ರಾಜ್ಯಪಾಲರು ಸಭಾಪತಿ ಸ್ಥಾನಕ್ಕೆ ಚುನಾವಣೆ ಘೋಷಿಸಿದ್ದು, ನಾಮಪತ್ರ ಸಲ್ಲಿಸಲು ಸೋಮವಾರ ಕಡೆಯ ದಿನವಾಗಿದೆ. ಮಂಗಳವಾರ ಚುನಾವಣೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದಕ್ಕೂ ಮುನ್ನ ನಡೆದ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಯಲ್ಲಿ 3 ದಿನಗಳ ಕಾಲ ಕಲಾಪವನ್ನು ವಿಸ್ತರಣೆ ಮಾಡುವಂತೆ ರಾಜ್ಯಪಾಲರಿಗೆ ಪತ್ರ ಬರೆದು ಮನವಿ ಮಾಡಲಾಗಿತ್ತು. ಈ ವಿಷಯವನ್ನು ಉಪಸಭಾಪತಿ ಕೆ.ಎಂ.ಪ್ರಾಣೇಶ್ ಸದನಕ್ಕೆ ತಿಳಿಸಿದರು.

**ಹೊರಟ್ಟಿಗೆ ಸಂಪುಟ ಸಹಮತ**

ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ಅವರನ್ನು ಆಯ್ಕೆ ಮಾಡಲು ಸಿಎಂ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸಂಪುಟ ಸಭೆಯಲ್ಲಿ ಸಹಮತ ವ್ಯಕ್ತವಾಗಿದೆ. ಹೊಸ ಸಭಾಪತಿ ಆಯ್ಕೆಗೆ ಚುನಾವಣೆ ನಡೆಸಲು ರಾಜ್ಯಪಾಲರಿಗೆ ಶಿಫಾರಸು ಮಾಡಬೇಕಿರುವ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಸಂಪುಟ ಸಭೆ ನಡೆಸಲಾಯಿತು. ಪರಿಷತ್ ಕಲಾಪವನ್ನು ಬುಧವಾರದ ವರೆಗೆ ವಿಸ್ತರಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಹೊಸ ಸಭಾಪತಿ ಆಯ್ಕೆಗೆ ಸೋಮವಾರ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಇರುತ್ತದೆ. ಮಂಗಳವಾರ ಈ ಸಂಬಂಧ ಚುನಾವಣೆ ನಡೆಯಲಿದೆ. ಈ ಚುನಾವಣೆಗೆ ರಾಜ್ಯಪಾಲರಿಂದ ಶುಕ್ರವಾರ ತಡ ರಾತ್ರಿ ಅಧಿಸೂಚನೆ ಅಧಿಕೃತವಾಗಿ ಹೊರಬಿದ್ದಿದೆ.

ಮೂರು ದಿನಗಳ ಕಲಾಪದಲ್ಲಿ ಸಭಾಪತಿ ಚುನಾವಣೆ ಜೊತೆ ಜೊತೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಚರ್ಚೆ- ಉತ್ತರ, ಪ್ರಶ್ನೋತ್ತರ ಹಾಗೂ ವಿಧೇಯಕಗಳ ಮಂಡನೆಗೆ ಅವಕಾಶ ದೊರಕಲಿದೆ.